<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ತರೀಕೆರೆ</u>

<u>ಸಿ.ಸಿ. ನಂ.1224/2021</u>

ದಿನಾಂಕಃ15.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಿ.ಡಬ್ಲ್ಯೂಃ1 ಸಿ.ಡಬ್ಲೂಃ1

| | | |
|---|---|---|
| ಸಾಕ್ಷಿಯ ಹೆಸರು | : | ರಫೀಕ್ ಎಂ |
| ತಂದೆಯ ಹೆಸರು | : | ಮುಜೀಬ್ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್‌ಪೆಕ್ಟರ್, ಲೋಕಾಯುಕ್ತ, ಉಡುಪಿ. |
| ವಾಸ | : | ಉಡುಪಿ. |

<u>**ಮುಖ್ಯ ವಿಚಾರಣೆಃ**</u> ಮಾನ್ಯ ಸ ಸ ಅ ರವರಿಂದಃ-

ನಾನು 10.08.2018 ರಿಂದ 15.11.2019 ರ ವರೆಗೂ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18.07.2019 ರಂದು ಬೆಳಗ್ಗೆ 07.00 ಗಂಟೆಗೆ ನಾನು ಠಾಣೆಯಲ್ಲಿ ಇರುವಾಗ ಹೊಸಹಳ್ಳಿ ತಾಂಡ್ಯದ ವಾಸಿ ಸಂತೋಷ್ ನಾಯ್ಕ ತಂದೆ ಕೃಷ್ಣನಾಯ್ಕ ಎಂಬುವವರು ತನ್ನ ಬಾಬ್ತುಮೋಟಾರ್ ಸೈಕಲ್ ಕೆ ಎ 18 ಎಕ್ಸ್ 7109 ಬೈಕ್ ನಲ್ಲಿ ಮದ್ಯವನ್ನು ಮಾರಾಟ ಮಾಡಲು ಮದ್ಯವನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ಚಾಸಾ 4 ರವರು ತಿಳಿಸಿದಂತೆ ನನಗೆ ಶೋದನೆ ಮಾಡಲು ನ್ಯಾಯಾಲಯದಿಂದ ಶೊಧನಾ ವಾರೆಂಟ್ ಪಡೆಯಲು ಸಾಕಷ್ಟು ಕಾಲವಕಾಶ ಇಲ್ಲದಿದ್ದ ಕಾರಣ ಮತ್ತು ತಡ ಮಾಡಿದರೆ ಆರೋಪಿಯು ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದ ಕಾರಣ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೂಡಲೇ ಠಾಣೆಯಿಂದ ಹೊರಟು ಠಾಣಾ ಮುಂಭಾಗದಲ್ಲಿ ಇದ್ದ ಚಾಸಾ 2 ಮತ್ತು 3 ರವರಿಗೆ ಮಾಹಿತಿಯನ್ನು ತಿಳಿಸಿ ಅವರಿಗೆ ಪಂಚರಾಗಿ ಸಹಕರಿಸಲು ಕೋರಿಕೊಂಡ ಮೇರೆಗೆ ಅವರು ಒಪ್ಪಿದ್ದು, ಸದರಿಯವರ ಜೊತೆ ಹಾಗೂ ಸಿಬ್ಬಂದಿಯಾದ ಚಾಸಾ 4 ರಿಂದ 6 ರವರ ಜೊತೆಯಲ್ಲಿ ಕರೆದುಕೊಂಡು ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟು ಹೊಸಹಳ್ಳಿ ತಾಂಡ್ಯದ ಹುಲಿಯಮ್ಮನ ಸರ ಎಂಬ ಹಳ್ಳದ ಬದಿ ಕಾಯುತ್ತಿರುವಾಗ ಎದುರಿನಿಂದ ಬಂದ ಬೈಕಿನಲ್ಲಿ ಒಬ್ಬ ವ್ಯಕ್ತಿಯು ನಮ್ಮನ್ನು ನೋಡಿ ಬೈಕ್ ಅನ್ನು ತಿರುಗಿಸಿ ಓಡಿ ಹೋಗಲು ಪ್ರಯತ್ನಿಸಿದಾಗ ಸದರಿಯವರನ್ನು ನಮ್ಮ ಸಿಬ್ಬಂದಿ ಹಿಡಿದು ಸದರಿ

ವ್ಯಕ್ತಿಯನ್ನು ಬೈಕ್ ಸಮೇತ ಹಿಡಿದು ನನ್ನ ಮುಂದೆ ಹಾಜರುಪಡಿಸಿದ್ದು ಸದರಿಯವರ ಹೆಸರು ವಿಳಾಸ ಕೇಳಲಾಗಿ ಆತನ ತನ್ನ ಹೆಸರು ಸಂತೋಷ್ ನಾಯ್ಕ, ವಾಸ ಹೊಸಹಳ್ಳಿ ತಾಂಡ್ಯ ಎಂದು ತಿಳಿಸಿರುತ್ತಾನೆ.

ನಂತರ ಸದರಿ ಬೈಕ್ ಅನ್ನು ಪರಿಶೀಲಿಸಿ ನೋಡಲಾಗಿ ಸದರಿ ಬೈಕ್ ಕೆ ಎ 18 ಎಕ್ಸ್ 7109 ಡಿಸ್ಕವರ್ ಬೈಕ್ ಆಗಿದ್ದು, ಸದರಿ ಬೈಕ್ ನ ಬಲ ಭಾಗದ ಸೈಡ್ ಬ್ಯಾಗ್ ಅನ್ನು ಪರಿಶೀಲಿಸಿದಾಗ ಅದರಲ್ಲಿ ನೀಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಇದ್ದು ಅದರಲ್ಲಿ 90 ಮಿಲಿ ಸಾಮರ್ಥ್ಯದ 48 Captain Martin Special Whiskey ಪೌಚ್‌ಗಳು ಸಿಕ್ಕಿದ್ದು, ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಸದರಿ ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ಸದರಿ ಮುದ್ದೆ ಮಾಲುಗಳನ್ನು ಸಾಗಾಟ ಮತ್ತು ಮಾರಾಟ ಮಾಡಲು ಯಾವುದೇ ಪರವಾನಗಿ ಇರುವ ಬಗ್ಗೆ ಕೇಳಲಾಗಿ ಅವರು ಯಾವುದೇ ಪರವಾನಗಿ ಇರುವುದಿಲ್ಲ ಎಂದು ತಿಳಿಸಿದ್ದು.

ನಂತರ ಪಂಚರ ಸಮಕ್ಷಮ ಮಹಜರ್ ಅನ್ನು ಬೆಳಗ್ಗೆ 07.45 ರಿಂದ 08.30 ಗಂಟೆಯವರೆಗೆ ಜರುಗಿಸಲಾಯಿತು. ಸದರಿ ಮದ್ಯವನ್ನು ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಅಮಾನತ್ತುಪಡಿಸಿ, ಸದರಿ ಚೀಲವನ್ನು ಪ್ಯಾಕ್ ಮಾಡಿ 'ಪಿ' ಎಂಬ ಅಕ್ಷರದಿಂದ ಮೊಹರು ಮಾಡಿ ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಸದರಿ ಚೀಲಕ್ಕೆ ಅಂಟಿಸಲಾಯಿತು. ತದನಂತರ ಆರೋಪಿಯನ್ನು ಠಾಣೆಗೆ ಬೆಳಗ್ಗೆ 09.00 ಗಂಟೆಗೆ ಕರೆದುಕೊಂಡು ಬಂದು ಚಾಸಾ 8 ರವರಿಗೆ ಮಹಜರ್, ವರದಿ, ಮುದ್ದೆ ಮಾಲುಗಳು, ಆರೋಪಿಯನ್ನು ನೀಡಿ ಪ್ರಕರಣವನ್ನು ದಾಖಲಿಸಲು ಸೂಚಿಸಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ವರದಿ ಆಗಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳ/ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು.

ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮುದ್ದೆಮಾಲಾದ ಚೀಲವನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿದ್ದ 90 ಮಿಲಿ ಸಾಮರ್ಥ್ಯದ 48 Captain Martin Special Whiskey ಯ ಖಾಲಿ ಪೌಚ್ ಗಳನ್ನು ಹಾಗೂ ಸದರಿ ಚೀಲವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಚೀಲವನ್ನು ಮು ಮಾ 1 ಎಂದು ಹಾಗೂ 90 ಮಿಲಿ ಸಾಮರ್ಥ್ಯದ 48 Captain Martin Special Whiskey ಯ ಖಾಲಿ ಪೌಚ್ ಗಳನ್ನು ಮು ಮಾ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:** ಆರೋಪಿ ಪರ ವಕೀಲರಿಂದಃ-

ನಾನು ಘಟನೆ ನಡೆಯಿತು ಎಂದು ಹೇಳುವ ಸ್ಥಳದಲ್ಲಿ ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ನಮ್ಮ ಇಲಾಖಾ ಅಂಕಿಅಂಶಗಳಿಗಾಗಿ ಸುಳ್ಳು ಮೊಕದ್ದಮೆಯನ್ನು ದಾಖಲು ಮಾಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು ಮಾ ಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಬೈಕಿ ನಲ್ಲಿ ಯಾವುದೇ ಮದ್ಯವನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ:ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರಃದಃನ್ಯಾಃದಂ.,ರವರು, ತರೀಕೆರೆ.